ಹನಿಗಳೋ, ವರ್ಷದ ಮೊದಲು ಮಳೆಯ ತುಂತುರ ಹನಿಗಳೋ ತಿಳಿಯುತ್ತಿರಲಿಲ್ಲ! ಆಕೆ ಯಾವಾಗಲು ತೊಯ್ದಂತೆ ಕಾಣುತ್ತಿದ್ದಳು. ಆಕೆಗೆ ತನ್ನವೆನ್ನುವ ಕಷ್ಟಗಳೇ ಇರಲಿಲ್ಲವೇನೋ? ಇದೆಲ್ಲ ಆಕೆ ಹೇಗೆ ನಿಭಾಯಿಸಿದಳು, ಗೊತ್ತಿಲ್ಲ! ಆಕೆ ನಾವೆಂದೂ ನೋಡದ ಮೇರಿಯಂತಿದ್ದಳು.

ಆಕೆ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದಳು. ಆವಶ್ಯಕತೆ ಇದ್ದರೆ ಮಾತ್ರ ಮಾತನಾಡುತ್ತಿದ್ದಳು. ಆಕೆ ಹೆಚ್ಚಿಗೆ ಯಾಕೆ ಮಾತನಾಡಲಿಲ್ಲ ಎನ್ನುವ ಕೊರಗು ನಿಮ್ಮನ್ನು ಕಾಡುತ್ತಿತ್ತು. ಆಕೆ ವಾಚಾಳಿಯಲ್ಲ. ದೈವದಂತೆ, ದೇವರಂತೆ ಮೌನಿ. ಆಕೆ ತನ್ನ ತೊಂದರೆಯ ದಿನಗಳಲ್ಲಿಯೂ ಕೂಡ ಯಾವ ಸದ್ದು ಗದ್ದಲ ಮಾಡುತ್ತಿರಲಿಲ್ಲ. ನಿಂತ ನೀರಿನಂತಿರುತ್ತಿದ್ದಳು. ಬಯಲು ಸೀಮೆಯ ಮಧ್ಯಾಹ್ನದ ಬಿಸಿಲಿನಂತೆ ಸ್ಥಿರವಾಗಿರುತ್ತಿದ್ದಳು. ಹಾರುವ ಪಕ್ಷಿ ಕಾಲದ ಮಧ್ಯೆ ಹೆಪ್ಪುಗಟ್ಟಿದಂತೆ ವಿಗ್ರಹವಾಗುತ್ತಿದ್ದಳು. ಕಣ್ಣು ಪಿಳುಕಿಸದೆ ನಿಲ್ಲುತ್ತಿದ್ದಳು. ಆಕೆಗೆ ಬಂದ ಕಷ್ಟಗಳಾದರೂ ಏನು? ಆಕೆ ವಯಸ್ಸಿಗೆ ಬಂದಾಗ ಮನೆಯಲ್ಲಿಯೇ ರೆಡಿಮೇಡಾದ ಸೋದರ ಮಾವನಿದ್ದ. ಆಕೆಯ ಹುಟ್ಟಿನ ಜೊತೆಗೆ ಮದುವೆ ನಿಶ್ಚಿತವಾದಂತಿತ್ತು. ಬದುಕಿಗೊಂದು ಹಾದಿ ಮಾಡಿಕೊಳ್ಳಬೇಕಾಗಿತ್ತು. ಗಂಡ ಅನಕ್ಷರಸ್ಥ. ತಾನೇ ಕಲಿಯಬೇಕು. ಉದ್ಯೋಗ ಪಡೆಯಬೇಕು. ಬದುಕು ಸಾಗಿಸಬೇಕು. ತಾನೇ ಶಿಕ್ಷಕ ತರಬೇತಿ ಮುಗಿಸಿದಳು. ಉದ್ಯೋಗ ಪಡೆದಳು. ಸಂಸಾರದ ಗಾಲಿಗಳು ಉರುಳಲಾರಂಭಿಸಿದವು. ಆಕೆಗೆ ಬರುವ ಪಗಾರ ಸಾಕಾಗಿತ್ತು. ಬೇಡಿಕೆಗಳೇ ಇಲ್ಲದಾಗ, ಹೆಚ್ಚಿನ ಹಣ ಹೆಣಭಾರ ಎಂದು ತಿಳಿದಿದ್ದಳು. ಬದುಕಲು ಒಂದು ಸೂರು ಬೇಕು. ಅದಕ್ಕಾಗಿ ಕ್ರಮನಿರತ ಉಳಿತಾಯ ಮಾಡಿ ಅದನ್ನು ಪೂರೈಸಿದಳು. ಅದರ ಭಾರವನ್ನು ಗಂಡನಿಗೂ ಕೊಡಲಿಲ್ಲ, ಮಕ್ಕಳಿಗೂ ವಹಿಸಲಿಲ್ಲ. ಅಣ್ಣತಮ್ಮಂದಿರನ್ನು ಕೇಳುವುದು ಬಹುದೂರದ ಮಾತಾಗಿತ್ತು. ಆಕೆ ಅಂಗೈ ತೆರೆದು ಎಂದೂ ಯಾರನ್ನೂ ಕೇಳಿದವಳಲ್ಲ. ಮುಷ್ಟಿ ಬಿಚ್ಚಿದವಳಲ್ಲ.

**ಆಕೆ ನನ್ನ ಕೈಬೆರಳುಗಳನ್ನು ಹಿಡಿದು ಜೊತೆಜೊತೆಯಾಗಿ ಸಾಗಿದ್ದಳು. ತನ್ನ ಮಮತೆಯ ಬೆಳದಿಂಗಳು ಸುರಿಸಿದ್ದಳು. ಕಷ್ಟದಲ್ಲಿ ದೇವರದನಿಯಾಗಿ ಸಂತೈಸಿದ್ದಳು. ಮನಸ್ಸಿನ ತುಂಬ ನೆಮ್ಮದಿಯ ಉಸಿರಾಗಿ ಸುಳಿದಿದ್ದಳು. ಸದಾ ಚೆಂದಗಿನ ಗೊಂಬೆಯಾಗಿ ಕಂಡಿದ್ದಳು. ಮದುವೆಯ ಮಂಟಪ ನೋಡಿದಾಗೊಮ್ಮೆ ಬಣ್ಣದ ಆಲ್ಬಂನಂತೆ ಕಣ್ಣೆದುರು ಸರಿದುಹೋಗಿದ್ದಳು.**

★★★

ತಂಗಿ ಇದು ಯಾವ ನೂಲಿನ ಎಳೆಯೋ ಗೊತ್ತಿಲ್ಲ! ಇದು ಭಾವ ಬಂಧನದ ಹುರಿಗೊಂಡ ಎಳೆ. ಇದು ತೆಳುವಾಗಿದ್ದರೂ ಹರಿಯದ ಎಳೆ. ಹರಿದಾಡುವ ಬಿಳಿಯ ಮೋಡದ ಅಂಚಿಗೆ ಸೂರ್ಯ ಕಿರಣ ಬಿಡಿಸಿದ ತಿಳಿ ಎಸಳಿನ ಬಂಗಾರದ ಎಳೆ. ಕಾಳು ಕಟ್ಟಿದ ಬಿಳಿಜೋಳದ ತೆನೆಯ ತುಟಿಯಿಂದ ಇಳಿದ ಜೇನಿನ ಎಳೆ. ನಂಬಿಕೆಯ ಭಗವಂತನ ಕಣ್ಣಲ್ಲಿ ಕಾಣುವ ಭವ ಬದುಕಿನಾಚೆ